**ಸಿ ಸಿ ನಂ. 1375/2021**

**ಪಿಡಬ್ಲ್ಯೂ - 1 ಎಂ ಎಂ ಪೆಮ್ಮಯ್ಯ**

**ದಿನಾಂಕ 23-08-2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು : ಶ್ರೀ. ಬಿ ಎಸ್ ಪಿ ಆರೋಪಿ ಪರ ವಕೀಲರಿಂದಃ**

ದಿನಾಂಕ 31-08-2019 ರಂದು ನಮ್ಮ ಬ್ಯಾಂಕ್ ನಲ್ಲಿ ಭಾಸ್ಕರ್ ಎನ್ನುವವರು ಮ್ಯಾನೇಜರ್ ಆಗಿದ್ದರು. ಆ ಸಮಯದಲ್ಲಿ ತಿಮ್ಮಯ್ಯ ಎನ್ನುವವರು ಪಿಗ್ಮಿ ಹಣವನ್ನು ಸಂಗ್ರಹಿಸುತ್ತಿದ್ದರು. ಸದರಿ ತಿಮ್ಮಯ್ಯನ ವಿರುದ್ಧ 2019-20 ನೇ ಸಾಲಿನಲ್ಲಿ ಸಾರ್ವಜನಿಕರಿಂದ ನಮ್ಮ ಬ್ಯಾಂಕ್ ಗೆ ಹಾಗೂ ಕೇಂದ್ರ ಕಛೇರಿಗೆ ಆತ ಹಣ ದುರುಪಯೋಗ ಮಾಡಿಕೊಂಡ ಬಗ್ಗೆ ಪುಕಾರು ಬಂದಿರುತ್ತದೆ ಎಂದರೆ ಸರಿಯಲ್ಲ. ಈಗ ಸದರಿ ತಿಮ್ಮಯ್ಯ ನಮ್ಮ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಿಲ್ಲ ಎಂದರೆ ಸರಿ. ಆತ ಈಗ ಎಲ್ಲಿ ಇರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಪಿಗ್ಮಿ ಸಾಲ ನೀಡಬೇಕಾದರೆ ಸದರಿ ಗ್ರಾಹಕ ಪಿಗ್ಮಿ ಕಟ್ಟುತ್ತಿರಬೇಕು ಎಂದರೆ ಸರಿ. ಒಂದು ಲಕ್ಷ ಪಿಗ್ಮಿ ಸಾಲ ನೀಡಬೇಕಾದರೆ ಆತ ತನ್ನ ಪಿಗ್ಮಿ ಖಾತೆಯಲ್ಲಿ ಇಪ್ಪತ್ತು ಸಾವಿರ ಠೇವಣಿ ಇಟ್ಟಿರಬೇಕು. ದಿನಾಂಕ 31-08-2019 ರಂದು ಆರೋಪಿಗೆ ಪಿಗ್ಮಿ ಸಾಲ ಕೊಡುವ ಸಮಯದಲ್ಲಿ ಆತನ ಪಿಗ್ಮಿ ಖಾತೆಯಲ್ಲಿ ಇಪ್ಪತ್ತು ಸಾವಿರ ಠೇವಣಿ ಇದ್ದಿರುತ್ತದೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೇವೆ. ಯಾವುದೇ ಗ್ರಾಹಕ ಸಾಲ ಪಡೆದುಕೊಳ್ಳಬೇಕಾದರೆ ಹಾಗೂ ಆತನ ಜೊತೆ ಜಾಮೀನುದಾರರು ಬಂದಲ್ಲಿ ಅವರೆಲ್ಲರೂ ಅರ್ಜಿಗಳನ್ನು ಹಾಗೂ ಸಂಬಂಧಿತ ದಾಖಲೆಗಳನ್ನು ನಮ್ಮ ಬ್ಯಾಂಕ್ ನ ವ್ಯವಸ್ಥಾಪಕರ ಮುಂದೆ ತುಂಬಿಸಿ, ಸಹಿ ಮಾಡಬೇಕೆಂದರೆ ಸರಿ.

ಆರೋಪಿಯ ಜಾಮೀನುದಾರರಾದ ದರ್ಶನ್ ಎನ್ನುವವರು ನಮ್ಮ ಬ್ಯಾಂಕ್ ನಲ್ಲಿ ಪಿಗ್ಮಿ ಖಾತೆ ಹೊಂದಿದ್ದು, ಧನಂಜಯ್ ರವರು ಆ ರೀತಿ ಪಿಗ್ಮಿ ಖಾತೆ ಹೊಂದಿರುವುದಿಲ್ಲ. ಗ್ರಾಹಕರು ಸಾಲದ ಅರ್ಜಿಯನ್ನು ನೀಡಿದರೆ ಅದೇ ದಿನ ಅಥವಾ ಮರುದಿನ ಸಾಲವನ್ನು ನೀಡುತ್ತೇವೆ. ಅರ್ಜಿಯು ಕ್ರಮ ಬದ್ಧವಾಗಿ ಇದ್ದಲ್ಲಿ ಮಾತ್ರ ಸಾಲ ಮಂಜೂರು ಮಾಡುತ್ತೇವೆ ಎಂದರೆ ಸರಿ. ಗ್ರಾಹಕರಿಗೆ ಸಾಲವನ್ನು ನೀಡುವಾಗ ಅವರಿಂದ ಸಾಲದ ಅರ್ಜಿ, ಪ್ರನೋಟ್, ಆಧಾರ್ ಕಾರ್ಡ್, ಪಾನ್ ಕಾರ್ಡ್, ಕರಾರು ಪತ್ರ, ಹಾಗೂ ಇಬ್ಬರು ಜಾಮೀನುದಾರರನ್ನು ಪಡೆದುಕೊಳ್ಳುತ್ತೇವೆ. ಜಾಮೀನುದಾರರು ಶಾಖೆಯ ವ್ಯವಸ್ಥಾಪಕರ ಮುಂದೆ ಸಹಿ ಮಾಡಬೇಕು

ಎಂದರೆ ಸರಿ. ಸಾಲದ ಅರ್ಜಿಯಲ್ಲಿ ಸಾಲಗಾರರ ಹಾಗೂ ಜಾಮೀನುದಾರರ ಫೋಟೋ ಅಂಟಿಸುವ ಜಾಗದಲ್ಲಿ ಸದರಿ ಫೋಟೋಗಳಿಗೆ ಅವರ ಸಹಿಯನ್ನು ಪಡೆದುಕೊಳ್ಳುವುದಿಲ್ಲ. ಸಾಲಗಾರರಿಂದ ಪಡೆದುಕೊಳ್ಳುವ ಮೇಲೆ ಹೇಳಿದ ದಾಖಲೆಗಳು ನಮ್ಮ ಬ್ಯಾಂಕ್ ನಲ್ಲೇ ಇರುತ್ತದೆ ಎಂದರೆ ಸರಿ. ಆರೋಪಿಯ ಸಾಲದ ಅರ್ಜಿಯನ್ನು ನಮ್ಮ ಬ್ಯಾಂಕ್ ನ ಸಿಬ್ಬಂದಿಯಾದ ಹೆಚ್ ಕೆ ಸರೋಜ ರವರು ತುಂಬಿಸಿರುತ್ತಾರೆ. ಕರಾರು ಪತ್ರದ ಛಾಪಾಕಾಗದವನ್ನು ಸಾಲಗಾರರೇ ತರುತ್ತಾರೆ. ಅವರು ಅದನ್ನು ಬರೆದುಕೊಟ್ಟ ನಂತರವೇ ಸಾಲವನ್ನು ಮಂಜೂರು ಮಾಡುತ್ತೇವೆ. ಮೇಲೆ ಹೇಳಿದ ದಾಖಲೆಗಳಿಗೆ ನಾವು ಒಂದರ ಮೇಲೆ ಒಂದು ಆದಂತೆ ಸಹಿ ಪಡೆಯುತ್ತೇವೆ ಎಂದರೆ ಸರಿ. ನಾವು ನ್ಯಾಯಾಲಯಕ್ಕೆ ಕಳೆದ ದಿನಾಂಕದಂದು ಹಾಜರುಪಡಿಸಿದ ಕರಾರು ಪತ್ರದಲ್ಲಿ ಛಾಪಾಕಾಗದವನ್ನು ಖರೀದಿಸಿದ ದಿನಾಂಕ 28-03-2018 ಎಂದು ನಮೂದಾಗಿರುತ್ತದೆ ಎಂದರೆ ಸರಿ. ಪ್ರನೋಟ್ ಹಾಗೂ ಕರಾರು ಪತ್ರಗಳಲ್ಲಿರುವ ಸಹಿಗಳು ಬೇರೆ ಬೇರೆ ಶಾಹಿಯಲ್ಲಿರುತ್ತದೆ ಎಂದರೆ ಸರಿಯಲ್ಲ.

ನಾವು ಸಾಲದ ಹಣವನ್ನು ವಸೂಲಿ ಮಾಡಲು ಹೋದ ಸಮಯದಲ್ಲಿ ಆರೋಪಿ ನಿಪಿ2 ಚೆಕ್ ನ್ನು ನೀಡಿರುತ್ತಾರೆ. ನಿಪಿ2 ಚೆಕ್ ರಲ್ಲಿರುವ ಬರವಣಿಗೆ ಆರೋಪಿಯದ್ದೆ ಆಗಿರುತ್ತದೆ. ದಿನಾಂಕ 20-07-2021 ಕ್ಕೆ ಆರೋಪಿಯು ಒಂದು ಲಕ್ಷದ ಒಂಭತ್ತು ಸಾವಿರದ ಎಪ್ಪತ್ತೆರಡು ರೂಪಾಯಿಗಳನ್ನು ಕೊಡಲು ಬಾಕಿ ಎಂಬುದರ ಬಗ್ಗೆ ನಿಪಿ2 ಚೆಕ್ ನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಆರೋಪಿಯಿಂದ ಭದ್ರತೆಗಾಗಿ ಪಡೆದ ಖಾಲಿ ಚೆಕ್ ನ್ನುನಾವೇ ತುಂಬಿಸಿಕೊಂಡು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ಹೂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ2 ರಲ್ಲಿರುವ ಬರವಣಿಗೆ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಾಯವಕಾಶ ನೀಡಿ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ.

ಸಹಿ/-
(ಸಂತೋಷ ಕೊಠಾರಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ